ಶ್ರೀ ಎಸ್. ಶಿವಪ್ಪ.—ಮಾನ್ಯ ಹಣಕಾಸಿನ ಸಚಿವರು ಕೊಟ್ಟ ಹೇಳಿಕೆಯ ಮುಖಾಂತರವಾಗಿ ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ಇವರ ಆರ್ಥಿಕ ನೀತಿ ಸರಿಯಾಗಿಲ್ಲ, ಹೆಚ್ಚು ಹಣವನ್ನು ಕೇಂದ್ರದಿಂದ ತಂದು ಶರಾವತಿಯಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ನಮ್ಮಲ್ಲಿಯೇ ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಬೇರೆ ರಾಜ್ಯಗಳನ್ನು ಅಂಗಲಾಚಿ ಬೇಡಿಕೊಳ್ಳುತ್ತಿದ್ದಾರೆ. ಹಾರಂಗಿ, ಹೇಮಾವತಿ, ಕೃಷ್ಣ ಈ ಯೋಜನೆಗಳಿಗೆ ಹೆಚ್ಚು ಹಣವನ್ನು ಕೇಂದ್ರದಿಂದ ಕೊಡಬೇಕೆಂದು ಒತ್ತಾಯ ಮಾಡತಕ್ಕ ಶಕ್ತಿ ಇಲ್ಲ. ನಮ್ಮ ಸರ್ಕಾರದವರೂ ಒತ್ತಾಯ ಮಾಡಿ ರಾಜ್ಯದಲ್ಲಿ ಆಗಬೇಕಾದ ದೊಡ್ಡ ನೀರಾವರಿ ಕೆಲಸಗಳಿಗೆ ಕೇಂದ್ರದಿಂದ ಹಣವನ್ನು ತರಬೇಕಾಗಿದೆ. ಭಿಕ್ಷೆ ಬೇಡುವುದಕ್ಕೆ ಹೋದರೆ ಅವರು ಕೊಡುತ್ತಾರೆಯೇ, ಸ್ವಾಮಿ? ಖಂಡಿತವಾಗಿ ಕೊಡುವುದಿಲ್ಲ. ಅವರ ಮೇಲೆ ಒತ್ತಾಯವನ್ನು ತರಬೇಕು. ಆಗ ಮಾತ್ರ ಕೊಡುತ್ತಾರೆ.

EIGHTH REPORT OF THE BUSINESS ADVISORY COMMITTEE

Mr. DEPUTY SPEAKER.—I present the Eighth Report of the Business Advisory Committee. I think the members agree to it.

HON'BLE MEMBERS.—Yes.

Notice of Adjournment Motion given by Sri M. Nagappa

ಶ್ರೀ ಎಂ. ನಾಗಪ್ಪ (ರಾಯಚೂರು).—ನಾನು ಸಭೆಯಲ್ಲಿ ಒಂದು ನಿಲುವಳಿ ಸೂಚನೆಯನ್ನು ತಂದಿದ್ದೇನೆ, ಸ್ವಾಮಿ. ಆ ವಿಷಯ ಏನೆಂದರೆ, ಈ ದಿವಸದ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಆಂಧ್ರದ ಮಾನ್ಯ ಮುಖ್ಯಮಂತ್ರಿಗಳಾದ ಕೆ. ಬ್ರಹ್ಮಾನಂದರೆಡ್ಡಿಯವರು ಆಂಧ್ರ ಪ್ರದೇಶ ಅಸೆಂಬ್ಲಿಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಒಂದು ಉತ್ತರವನ್ನು ಕೊಟ್ಟಿದ್ದಾರೆ ಎಂದು ಬಂದಿದೆ. ಕೃಷ್ಣ, ಗೋದಾವರಿ ನೀರಿನ ಬಗ್ಗೆ ಸಂಬಂಧಪಟ್ಟ ಸರ್ಕಾರದವರು ನೋಟೀಸ್ ಕೊಟ್ಟಿದ್ದಾರೆಯೋ ಏನೋ ಎಂದು ಕೇಳಿದರೆ ಏನೋ ಒಂದು ರಾಂಗ್ ರೇಂಜ್ ಷೂಟಿಂಗ್ (Long Range Shooting) ಇದೆ. ಅದರಲ್ಲಿ ಯಾವ ತರಹ ಸತ್ಯಾಂಶವಿಲ್ಲ ಎನ್ನುವ ವಿಷಯವನ್ನು ಅವರು ಹೇಳುತ್ತ ವಾಸ್ತವಿಕವಾಗಿ ನಾವು ಮಾಡತಕ್ಕದ್ದೆಲ್ಲ ಡಾಲು ಇದೆ. ಅವರಿಗೆ ಯಾವ ತರಹ ಕೇನೂ ಸಬ್‌ಸ್ಟಾನ್‌ಷಿಯರ್ ಆಗಿ ಇಲ್ಲ ಎಂದು ಸೂಚಿಸಿದ್ದಾರೆ. ಈ ಹೇಳಿಕೆಯನ್ನು ನಾವು ಓದಿದರೆ ಅದು ಸತ್ಯವಾದುದೇನೋ ಎನ್ನುವ ಭಾವನೆ ನಮ್ಮ ಗಮನಕ್ಕೆ ಬರುತ್ತದೆ.

Mr. DEPUTY SPEAKER.—We have been discussing the P.W.D. Demand. I will give Sri Nagappa a chance. when he can refer to these things.

2-30 P.M.

ಶ್ರೀ ಎಂ. ನಾಗಪ್ಪ.—30ನೆಯ ತಾರೀಖು ಅಕ್ಟೋಬರ್ 1967ಕ್ಕೆ ನೋಟೀಸು ಕೊಡುತ್ತೇವೆಂದು ಒಂದು ಹೇಳಿಕೆ ಕೊಟ್ಟಿದ್ದರು. ಅವರು ಒಪ್ಪದಿದ್ದರೆ ಯಾವ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಕೊಳ್ಳುತ್ತೇವೆ ಎಂದು ತಿಳಿಸಿದ್ದರು. ಇದನ್ನು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ತಿಳಿಸಿದ್ದರು. ಆದರೆ ಅದರಂತೆ ನಡೆದುಕೊಂಡಿರುವುದಿಲ್ಲ. ಇದು ಬಹಳ ಅವಶ್ಯವಾದ ವಿಚಾರವಾಗಿರುವುದರಿಂದ ಈ ದಿವಸ ನಾನು ಕಳುಹಿಸಿರುವ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಎರಡನೆಯದಾಗಿ ಇಂಥ ವಿಷಯವನ್ನು ನಿಲುವಳಿ ಸೂಚನೆಯ ರೂಪದಲ್ಲಿ ಹಿಂದೆ ತಂದಾಗ ಸಭೆಯ ಮುಂದೆ ಅದಕ್ಕೆ ಸಂಬಂಧಪಟ್ಟ ಯಾವುದಾದರೂ ವಿಷಯವಿದ್ದರೆ ಅದರ ಮೇಲೆ ಮಾಡಬಹುದಾಗಿ ತಿಳಿಸಬಹುದು ಎಂದು ತಿಳಿಸಿದ್ದರು. ಜ್ಯೋತಾ ಸೂಚನೆಗಳನ್ನು ಕೊಟ್ಟಾಗ ಕೂತ